International Journal of Kannada Research 2017; 3(1): 149-150

International Journal of Kannada Research
www.kannadajournal.com

ISSN: 2454–5813
IJSR 2017; 3(1): 149-150
© 2017 IJKS
www.kannadajournal.com
Received: 26-11-2016
Accepted: 27-12-2016

**ಸಂಶೋಧನಾ ವಿದ್ಯಾರ್ಥಿ**
ಅನುಪಮಾ ಸಿ. ಉತ್ನಾಳ,
ರಾ.ಚ.ವಿ.ಬೆಳಗಾವಿ, ಕರ್ನಾಟಕ

**ಮಾರ್ಗದರ್ಶಕರು**
ಡಾ. ಅಶೋಕ ನರೋಡೆ

Correspondence
**ಸಂಶೋಧನಾ ವಿದ್ಯಾರ್ಥಿ**
ಅನುಪಮಾ ಸಿ. ಉತ್ನಾಳ,
ರಾ.ಚ.ವಿ.ಬೆಳಗಾವಿ, ಕರ್ನಾಟಕ

# ಬಸವ ಚಿಂತನ

**ಅನುಪಮಾ ಸಿ. ಉತ್ನಾಳ, ಸಂಶೋಧನಾ ವಿದ್ಯಾರ್ಥಿ, ಡಾ. ಅಶೋಕ ನರೋಡೆ, ಮಾರ್ಗದರ್ಶಕರು**

## ಪ್ರಸ್ಥಾವನೆ

ಸಾವಿರಾರು ವರ್ಷಗಳಿಂಧ ಭರತ ಖಂಡದಲ್ಲಿ ಜನ್ಮವೆತ್ತಿ, ಭೌತಿಕ ಮತ್ತು ಆಧ್ಯಾತ್ಮಿಕ ಸಾಹಸಗಳಿಂದ ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಿದ. ಬಸವಣ್ಣ ಜನಮಾನಸ ಗರ್ಭದಲ್ಲಿ ನಿರಂತರವಾಗಿ ವಿಕಾಸಗೊಳ್ಳುತ್ತಾ ನಾಡಿನ ಸಮಕಾಲೀನ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಸೂಚಿಸಿದ ಮಹಾಮಾನವತಾವಾದಿ. ಬಸವಣ್ಣ ಜೀವನದ ಎಲ್ಲ ಕ್ಷೇತ್ರಗಳ ಯುಗಪುರುಷ; ಎನ್ನಿಸಿದ್ದಾನೆ. ಹೀಗಾಗಿ ಅವನನ್ನು ಜಗತ್ತು ಕಂಡ ಒಬ್ಬ ಅಪರೂಪದ ಸಮಗ್ರ ಯುಗ ಪುರಷನೆಂದು ಗುರುತಿಸಲಾಗುತ್ತದೆ. ಹನ್ನೆರಡನೆಯ ಶತಮಾನ ಕನ್ನಡ ನಾಡು ಕಂಡ ಮಹತ್ತರ ಬದಲಾವಣೆಯ ಕಾಲ ಘಟ್ಟ. ಸಾಮಾಜಿಕವಾದ ಸಂಕೀರ್ಣವಾದ ಕಾಲ ಘಟ್ಟ, ಬಸವಣ್ಣನವರು ಸಮಾಜ ಸುಧಾರಣೆಗೆಂದೆ ತಮ್ಮ ಬದುಕನ್ನು ಮಿಸಲಾಗಿರಿಸಿದ್ದಾರೆ. ಬಸವಣ್ಣ 'ಅವತಾರಿ' ಪುರುಷ, ಆತನ ಕಾಯಕ ಮತ್ತು ದಾಸೋಹಗಳು ನಿತ್ಯ ಪ್ರಸ್ತುತವೆನಿಸುತ್ತವೆ.

## ಉದ್ದೇಶ

ಬಸವಣ್ಣನವರ ಆಧ್ಯಾತ್ಮಿಕ ಸಾಧನೆ, ಅಂತರಂಗದ ಔನತ್ಯ, ವಚನ ರಚನೆಗಳೊಂದಿಗೆ, ಬಸವಣ್ಣ ಸಮಾಜ ಸುಧಾರಣೆ, ದಲಿತರಿಗೆಲ್ಲ ಸರಿಯಾದ ಶಿಕ್ಷಣ ನೀಡಿ, ಅವರ ಮನ ಪರಿವರ್ತಿಸಿ, ಬದುಕನ್ನು ಉತ್ತಮಗೊಳಿಸಿ, ಮುಖ್ಯ ವಾಹಿನಿಗೆ ತರಬೇಕೆಂದು ಶ್ರಮಿಸಿದ. ಬಸವಣ್ಣನವರು ಹೊಸ ಸಮಾಜ ಕಟ್ಟಲು ಸಂಕಲ್ಪಿಸಿದರು. ಕಾಯಕ ದಾಸೋಹಗಳೆಂಬ ಮೌಲ್ಯಗಳನ್ನು ಜನಮಾನಸದಲ್ಲಿ ಬಿತ್ತಿದರು. ಜನರಾಡುವ ಸರಳ ಭಾಷೆಯಲ್ಲಿ ವಚನ ರಚಿಸಿ ಹೊಸ ಧರ್ಮದ ಸಾರ ತಿಳಿಸಿರುವದರಿಂದ ಸಾವಿರಾರು ಶಿವಶರಣರು ಕಲ್ಯಾಣದಲ್ಲಿ ಸೇರಿದರು. ಬಸವಣ್ಣ ಅರಮನೆಯ ಪರಿಕಲ್ಪನೆಗೆ ಮುಖಾಮುಖಿಯಾಗಿ ಮಹಾಮನೆ ಸ್ಥಾಪಿಸಿದ. ಮಹಾಮನೆಯಲ್ಲಿ ನಿತ್ಯ ದಾಸೋಹ ದೇಶದೆಲ್ಲಡೆಗಳಿಂದ ಶಿವಶರಣರು ವಲಸೆ ಬಂದರು. ದುಡಿಯುವ ವರ್ಗದಿಂದ ಬಂದ ಜನ ಸಾಮಾನ್ಯರು ಬಸವ ತತ್ವಗಳಿಗೆ ಮಾರು ಹೋದರು. ಕಲ್ಯಾಣದಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಜನ ಶಿವಶರಣರು ಸೇರಿದರು. 'ಕಾಯಕ' ದ ಮಹತ್ವ ಅರಿತು ವಂಶ ಪರಂಪರೆಯಿಂದ ಬಂದ ವಂಶವೃತ್ತಿಯನ್ನು ಮುಂದುವರಿಸಿದರು. ದಿನವಿಡಿ ಕಾಯಕ ಸಂಜೆ ಹೊತ್ತು ಅನುಭಾವ ಚಿಂತನ ಶಿವಶರಣರೆಲ್ಲಾ ಒಂದೆಡೆ ಸೇರಲೇಂದೆ ಬಸವಣ್ಣ ಅನುಭಾವ ಮಂಟಪ ಹುಟ್ಟುಹಾಕಿದ ಅದರ ಸುಗಮ ಕಲಾಪಕ್ಕೆ ಶೂನ್ಯ ಸಿಂಹಾಸನ ಪೀಠಸ್ಥಾಪಿಸಿದ. ಸಮಾಜವನ್ನು ಸುವ್ಯವಸ್ಥಿತವಾಗಿ ಇಡುವುದಕ್ಕಾಗಿ ಜಾತಿ ಎಂಬ ವಿಭಜನೆಯಿದೆ. ಎಲ್ಲ ಜಾತಿಗಳಲ್ಲೂ, ದುರ್ಜನರು, ಸಜ್ಜನರು ಇದ್ದೆ ಇರುತ್ತಾರೆ ಎಂಬ ಮನವರಿಕೆ ಮಾಡಿಸಿದ. ದುಡಿಯದೆ ತಿನ್ನುವುದು. ಮತ್ತೊಬ್ಬರ ಶ್ರಮದ ಪಾಲನು ಸವಿಯುವುದು ಅಪರಾಧವೆಂದು ಮನವರಿಕೆ ಮಾಡಿದನು. ಬಸವಣ್ಣ ಮತ್ತು ಶರಣ ಚಳುವಳಿ ಎಲ್ಲ ಶತಮಾನಗಳಿಗೂ ಒಂದು ಹೊಸ ಮಾದರಿಯಾಗಿ ರೂಪುಗೊಂಡಿದೆ.

ಬಸವಣ್ಣನವರು ಮಹಿಳಾ ಸಮಾನತೆಗಾಗಿ ಹೊರಾಡಿದರು. ಮಹಿಳೆ ಕುಟುಂಬದ ಆಧಾರ, ಅಷ್ಟೇ ಅಲ್ಲದೆ ದಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಬುದ್ಧರು. ಅವರಿಗೆ ನಾವು ಕೊಡುವುದು ದಾಕ್ಷಿಣ್ಯವಲ್ಲ, ಅವರಿಗೆ ಸಿಗತಕ್ಕ ನಿಜವಾದ ಹಕ್ಕು ಎಂದು ಸಾರಿದರು. ಹಸಿದ ಮಕ್ಕಳಿಗೆ, ಹಸಿವಿನಿಂದ ಒದ್ದಾಡುವ ಬಡವರಿಗೆ ಮತ್ತು ಅನಾರೋಗ್ಯದಿಂದ ನರಳುವ ಅನಾಥರಿಗೆ, ಆಹಾರ, ಚಿಕಿತ್ಸೆ ನೀಡಿದರೆ, ಅದು ನಿಜವಾದ "ಜನಾರ್ಧನ ಸೇವೆ" ಎಂಬ ವಿಚಾರವನ್ನು ಅಂದೇ ಅರುಹಿದ್ದನು.

ಕಾಯಕದ ಮಹತ್ವ ಅರಿತು ತನ್ನ ದುಡಿಮೆಯ ಫಲದಲ್ಲಿ ಈ ಲೋಕದ ಉದ್ಧಾರಕ್ಕಾಗಿ ನೀಡಿದರೆ, ದುಡಿಮೆ ಕೇವಲ ಹೊಟ್ಟೆ ತುಂಬಿಸಿಕೊಳ್ಳಲು ಮಾತ್ರ ಅಲ್ಲ ಎಂಬ ಅರಿವು ಎಲ್ಲರಲ್ಲೂ ಮೂಡುತ್ತದೆ.

ಬೇರೂರಿರುವ ಮೇಲು ಕೀಳೆಂಬ ವಿಷಯವನು ತೆಗೆಯಬೇಕು, ಕೇವಲ ಮಾತಿನಲ್ಲಿ ಹೇಳಿದರೆ ನಡೆಯದು ಕೃತಿಯಲಿ ಆಚರಣೆ ಬರುವಂತೆ ಅನೇಕ ಇಂತಹ ಜನರನ್ನು ಕರೆದೂ ಲಿಂಗದೀಕ್ಷೆ ಹೊಸ ಜೀವನಕ್ಕೆ ಚಾಲನೆ ನೀಡಿದರು. ಪ್ರತಿಯೊಂದು ಸಣ್ಣ ಕೆಲಸವನ್ನು ಮನಸ್ಸಿಟ್ಟು ಮಾಡುವಂತೆ, ಶುಚಿಯ ಮಹತ್ವ ತಿಳಿ ಹೇಳಿ ಮರೆಯಲ್ಲಿರುವವರನ್ನು ಹೊರ ತಂದು ಬದಕುವ ಹಕ್ಕು ನಿಮಗೂ ಇದೆ ಎಂಬ ವಿಚಾರಗಳನ್ನು ತಿಳಿಸಿದ.

**ಸಮಾರೋಪ**

ಬಸವಣ್ಣ ಈ ನಾಡು ಕಂಡ ಬಹುದೊಡ್ಡ ಸಮಾಜೊದ್ಧಾರ್ಮಿಕ ನಾಯಕ. ಅನುಭವ ಮತ್ತು ಅನುಭಾವಗಳ ಮೂರ್ತರೂಪ. ಬಸಣ್ಣನ ಅದ್ಭುತ ಜೀವನ ಸಾಧನೆ ಅಸಾಧಾರಣ ತತ್ವ, ಸಂದೇಶಗಳ ದರ್ಶನ ಮಾಡಿಸುವುದರ ಜೊತೆಗೆ ಸಾರ್ವಕಾಲಿಕ ಮೌಲ್ಯಗಳನ್ನು ಸಾರಿದ. ಕಾಯಕ ಜೀವಿಗಳಿಗೆ ನೈತಿಕ ಸ್ಥೈರ್ಯ ತುಂಬಿ ಜಗತ್ತಿನ ಒಳಿತಿಗೆ ಅತ್ಯವಶ್ಯವಾದ ಮಾನವೀಯ ಮೌಲ್ಯಗಳನ್ನು ಹೇಳಿದ. ಸಮಸ್ತ ಮನುಕುಲದ ಏಳಿಗೆ ಸೋದರತ್ವದ ಕಲ್ಪನೆ, ವಿಶ್ವ ಬಂಧುತ್ವದ ವಿಚಾರ ಬಸವನ ವಚನಗಳಲ್ಲಿ ಸಾಕಾರಗೊಂಡಿವೆ. ಬಿದ್ದವರನ್ನು ಉದ್ಧರಿಸುತ್ತ, ಕೆಳಜನರಿಗೆ ಗೌರಯುತ ಸ್ಥಾನ ಮತ್ತು ಅಭಿಮಾನ ನೀಡಿ, ಉತ್ತಮ ಜೀವನ ನಡುಸುವಂತೆ ಅನುಕೂಲ ಮಾಡಿಕೊಟ್ಟನು.

**ಆಧಾರ ಗ್ರಂಥಗಳು**

೧. ಬಸವ ಮಹಾದರ್ಶನ– ಡಾ. ಲತಾ ರಾಜಶೇಖರ.
೨. ವಚಾನರ್ಥ ಚಿಂತನ – ಸಿದ್ಧರಾಮ ಸ್ವಾಮಿಗಳು, ವಚನ ಅಧ್ಯಯನ ಕೇಂದ್ರ, ಬೆಳಗಾವಿ